**ದಿನಾಂಕಃ 11-01-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎನ್.ಡಿ.ವಕೀಲರಿಂದಃ**

ನನ್ನ ಸ್ವಂತ ಊರು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿ ಬಸವಪಟ್ಟಣ ಆಗಿದೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಮಾಸಿಕ ವೇತನ 25 ಸಾವಿರ ಆಗಿದೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ದಿನದಂದು ಮೋಟಾರ್ ಸೈಕಲ್ ನಂ.ಕೆಎ.17/E.W.6333 ರ ವಾಹನದಲ್ಲಿ ಹಿಂಬದಿ ಸವಾರನಾಗಿ ಪ್ರಯಾಣಿಸುತ್ತಿದ್ದೆ. ಸದರಿ ಅಪಘಾತದ ಸಮಯದಲ್ಲಿ ನಾನು ಹಿಂಬದಿ ಸವಾರನಾಗಿ ಪ್ರಯಾಣಿಸುತ್ತಿದ್ದ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿ.

ಸದರಿ ಅಪಘಾತದ ದಿನದಂದು ಅಂದರೆ ದಿಃ 26-08-2020 ರಂದು ನಾನು ಚಿಲೂರು ಗ್ರಾಮದಿಂದ ಬಸವಪಟ್ಟಣಕ್ಕೆ ಹೊನ್ನಾಳಿ ಮಾರ್ಗವಾಗಿ ಹೋಗುತ್ತಿದ್ದೇವು. ಸದರಿ ಸಮಯದಲ್ಲಿ ನಾವು ರಸ್ತೆಯ ಎಡಭಾಗದಲ್ಲಿಯೇ ಪ್ರಯಾಣಿಸುತ್ತಿದ್ದೇವು. ಸದರಿ ಅಪಘಾತದ

ಸಮಯದಲ್ಲಿ ಕಾರ ಚಾಲಕ ತನ್ನ ಕಾರಿನ ಮುಂಭಾಗದಿಂದಲೇ ನಮ್ಮ ಬೈಕ್ ಗೆ ಡಿಕ್ಕಿ ಮಾಡಿದ್ದಾರೆ. ನನ್ನ ಪ್ರಕಾರ ಸದರಿ ಅಪಘಾತ ಬೈಕ್ ಚಾಲನೆ ಮಾಡುತ್ತಿದ್ದ ನನ್ನ ಸ್ನೇಹಿತನ ಬೈಕ್ ಮತ್ತು ಸದರಿ ಕಾರಿನ ಮಧ್ಯ ಮುಖಾಮುಖಿಯಾಗಿ ಅಪಘಾತವಾಗಿರುತ್ತದೆ. ಸದರಿ ಅಪಘಾತದಿಂದ ನಾನು ಹಿಂಬದಿ ಸವಾರನಾಗಿ ಪ್ರಯಾಣಿಸುತ್ತಿದ್ದ ಬೈಕ್ ಸಂಪೂರ್ಣವಾಗಿ ಜಖಂ ಆಗಿರುತ್ತದೆ.

ದಿಃ 26-08-2020 ರಂದು ಹೊನ್ನಾಳಿಯಿಂದ ಶಿವಮೊಗ್ಗಕ್ಕೆ ಹೋಗುತ್ತಿದ್ದ ಕಾರ್ ಸಂಖ್ಯೆ.ಕೆಎ.14/ಎನ್.9891 ರ ವಾಹನಕ್ಕೆ ನಾವೇ ನಮ್ಮ ಬೈಕ್ ಸಂಖ್ಯೆ ಕೆಎ.17/EW.6333 ನ್ನು ಮುಖಾಮುಖಿಯಾಗಿ ಗುದ್ದಿ ಅಪಘಾತವನ್ನುಂಟು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ ಸದರಿ ಕಾರಿಗೆ ಯಾವ-ಯಾವ ಜಖಂಗಳು ಆಗಿವೆ ಎನ್ನುವುದನ್ನು ನಾನು ನೋಡಿರುವುದಿಲ್ಲ.

ಸದರಿ ಅಪಘಾತದ ನಂತರ ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕೊಂಡಿದ್ದೇನೆ. ಸದರಿ ಅಪಘಾತದಲ್ಲಿ ನನ್ನ ಎಡಭುಜ ದ ಮೂಳೆ ಮುರಿತವಾಗಿರುತ್ತದೆ ಮತ್ತು ಬಲಮೊಣಕಾಲಿನ

ಮೂಳೆ ಮುರಿತವಾಗಿರುತ್ತದೆ. ಸದರಿ ಆಸ್ಪತ್ರೆಯಲ್ಲಿ ನಾನು 10 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದು ಕೊಂಡಿದ್ದೇನೆ . ಸದರಿ ಸಮಯದಲ್ಲಿ ಎಕ್ಸ-ರೇ ಯನ್ನು ತೆಗೆದಿದ್ದಾರೆ. ಸದರಿ ನನ್ನ ಮೂಳೆ ಮುರಿತಕ್ಕೊಸ್ಕರ ಯಾವುದೇ ಶಸ್ತ್ರಚಿಕಿತ್ಸೆ ಆಗಿರುವುದಿಲ್ಲ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಡಿಸಚಾರ್ಜ ಸಮರಿ (ನಿ.ಪಿ-8) ರಲ್ಲಿ ನನಗೆ ಕೇವಲ ಕಂಜರವೆಟಿವ್ ಟ್ರಿಟಮೆಂಟ್ ನೀಡಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ.

ನಾನು ಚಿಕಿತ್ಸೆ ಪಡೆದು ಕೊಂಡ ಶಿವಮೊಗ್ಗದ ಆಸ್ಪತ್ರೆಯ ವೈದ್ಯರಿಗೆ ನನಗೆ ನನ್ನ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನೀಡುವಂತೆ ನಾನು ಕೇಳಿ ಕೊಂಡಿರುವುದಿಲ್ಲ.

ಸದರಿ ವೈದ್ಯರ ಬಳಿ ನನ್ನ ಅಂಗನ್ಯೂನ್ಯತೆ ಪ್ರಮಾಣ ಪತ್ರ ವನ್ನು ಪಡೆದು ಕೊಳ್ಳಲು ನನಗೆ ಏನು ತೊಂದರೆ ಇರಲಿಲ್ಲ. ದಾವಣಗೆರೆಯ ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಯಲ್ಲಿ ನಾನು ಕೇವಲ ನನ್ನ ಅಂಗನ್ಯೂನ್ಯತೆ ಪ್ರಮಾಣ ಪತ್ರ (ನಿ.ಪಿ-9) ರ ದಾಖಲೆಯನ್ನು ಪಡೆದು ಕೊಳ್ಳುವ ಸಲುವಾಗಿಯೇ ಹೋಗಿದ್ದೆ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯಲ್ಲಿ

ಚಿಕಿತ್ಸೆ ಪಡೆದು ಕೊಂಡಿದ್ದೇನೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವಣಗೆರೆಯ ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಗೆ ನಾನು 1 ಬಾರಿ ಹೋಗಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲಾತಿಗಳಲ್ಲಿ ಸದರಿ ದಾವಣಗೆರೆಯ ಎಸ್.ಎಸ್. ಐ.ಎಂ.ಎಸ್ ಆಸ್ಪತ್ರೆಗೆ ನಾನು 1 ಬಾರಿ ಚಿಕಿತ್ಸೆ ಪಡೆದು ಕೊಳ್ಳಲು ಹೋಗಿದ್ದೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-4 ರ ಗಾಯದ ಪ್ರಮಾಣ ಪತ್ರವನ್ನು ಮತ್ತು ನಿಪಿ-8 ರ ಡಿಸಚಾರ್ಜ ಸಮರಿ ದಾಖಲೆಗಳನ್ನು ನಾನು ಸೃಷ್ಟಿ ಮಾಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಉಂಟಾಗದೇ ಇದ್ದರೂ ಸಹ ನಿ.ಪಿ-9 ರ ಅಂಗನ್ಯೂನ್ಯತೆ ಪ್ರಮಾಣ ಪತ್ರ ವನ್ನು ಖೊಟ್ಟಿಯಾಗಿ ಸೃಷ್ಟಿಸಿ ಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿನ ಬಸವಪಟ್ಟಣದಿಂದ ಬಸ್ ನಲ್ಲಿ ನ್ಯಾಯಾಲಯಕ್ಕೆ ಬಂದಿದ್ದೇನೆ. ನನ್ನ ದಿನನಿತ್ಯದ ಕೆಲಸಗಳನ್ನು

ನಾನೇ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಪಿ-1 ರಿಂದ ನಿ.ಪಿ-15 ರ ದಾಖಲೆಗಳಲ್ಲಿ ನನ್ನ ಚಿಕಿತ್ಸೆಗೊಸ್ಕರ ನಾನು ಎರಡು ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಎನ್ನುವ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೊಸ್ಕರ ನಾನು ಎರಡು ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲದೇ ಇದ್ದರೂ ಸಹ ಸದರಿ ದಾಖಲೆಯನ್ನು ಹಾಜರು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಂದಿನ ಚಿಕಿತ್ಸೆಗೊಸ್ಕರ 50 ಸಾವಿರ ರೂಪಾಯಿಗಳ ಅವಶ್ಯಕತೆ ಇದೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಚ್ಚುವರಿ ಚಿಕಿತ್ಸೆಗೊಸ್ಕರ 50 ಸಾವಿರ ರೂಪಾಯಿಗಳ ಅವಶ್ಯಕತೆ ಇದೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದರೂ ಸಹ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ

ಯಾವುದೇ ಗಾಯಗಳು ಹಾಗು ಅಂಗನ್ಯೂನ್ಯತೆಗಳು ಉಂಟಾಗಿರುವುದಿಲ್ಲ ಆದರೂ ಸಹ ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-4 ರ ಗಾಯದ ಪ್ರಮಾಣ ಪತ್ರ ಮತ್ತು ನಿಪಿ-8 ರ ಡಿಸಚಾರ್ಜ ಸಮರಿಯ ದಾಖಲೆಗಳನ್ನು ಸೃಷ್ಟಿಸಿ ಕೊಂಡು ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಕಾರ್ ಚಾಲಕನನ್ನು ನಾನು ನೋಡಿರುವುದಿಲ್ಲ. ಸದರಿ ಕಾರ್ ಚಾಲಕನ ಬಳಿ ಡಿ.ಎಲ್ ಇರಲಿಲ್ಲ, ಸದರಿ ಕಾರಿಗೆ fitness ಇರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ಕಾರ್ ಚಾಲಕನ ಬಳಿ ಡಿ.ಎಲ್ ಇರಲಿಲ್ಲ ಮತ್ತು ಸದರಿ ಕಾರಿಗೆ fitness ಇಲ್ಲದೇ ಇರುವ ಕಾರಣಕ್ಕಾಗಿ 2 ನೇ ಎದುರುದಾರ ನನಗೆ ಯಾವುದೇ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.